**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ದಿನಾಂಕ 19 ನೇ ಮಾಹೆ ಸೆಪ್ಟಂಬರ್ 2023**

**<u>ಸಿ.ಸಿ.ಸಂ.2331/2021</u>**

ಪಿರ್ಯಾದುದಾರರು : ರಾಜ್ಯದ ಪರ ಬೆಟ್ಟದಪುರ ಠಾಣಾ ಆರಕ್ಷಕರು

**ವಿರುದ್ಧ**

ಆರೋಪಿಗಳು :1. ಶಿವಲಿಂಗೇಗೌಡ,
ಬಿನ್ ಬೋರೇಗೌಡ,
ವಯಸ್ಸು 52 ವರ್ಷ,
ವೃತ್ತಿಃ ವ್ಯವಸಾಯ.

2. ಉದಯ್ ಕುಮಾರ್,
ಬಿನ್ ಬೋರೇಗೌಡ,
ವಯಸ್ಸು 33 ವರ್ಷ,
ವೃತ್ತಿಃ ವ್ಯವಸಾಯ.

ಇಬ್ಬರ ವಾಸಃ ಸುರಗಳ್ಳಿ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ಆರೋಪಣೆ</u>**

ಶ್ರೀಮತಿ.ಶ್ವೇತ.ಜೆ., *ಬಿ.ಕಾಂ., ಎಲ್.ಎಲ್.ಬಿ*, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಗಳಾಯಾದ ನಿಮ್ಮ ಮೇಲೆ ಅಂದರೆ, 1 ಮತ್ತು 2 ನೇ ಆರೋಪಿಗಳಾದ ವಿರುದ್ದ ಮಾಡುವ ಆಪಾದನೆ ಏನೆಂದರೆ,

ಮೊದಲನೇಯದಾಗಿ, ದಿನಾಂಕ 13.05.2021 ರಂದು ಸಂಜೆ 6.00 ಗಂಟೆ ಸಮಯದಲ್ಲಿ, ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು, ಸುರಗಳ್ಳಿ ಗ್ರಾಮದಲ್ಲಿ ಚಾಸಾ.1 ಗೀತಾ ಮತ್ತು ಚಾಸಾ.2 ಧನಂಜಯ ರವರ ಭಾಗಕ್ಕೆ ಬಂದಿರುವ ಮನೆಯೊಳಗೆ 1 ಮತ್ತು 2 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಪ್ರವೇಶ ಮಾಡಿರುತ್ತೀರಿ, ಆ ಮೂಲಕ 1 ಮತ್ತು 2 ನೇ

ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.448 ಸಹವಾಚಕ 34 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಎರಡನೇಯಾದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ಮತ್ತು 2 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮನೆಯೊಳಗೆ ಇದ್ದ ಟಿ.ವಿ, ಟಿಪಾಯ್, ದಿವಾನ್ ಕಾಟ್, ಪ್ಲಾಸ್ಟೀಕ್ ಚೇರ್ ಗಳನ್ನು ಕಲ್ಲಿನಿಂದ ಮತ್ತು ಮಚ್ಚಿನಿಂದ ಹೊಡೆದು ಹಾಕಿ ರೂ.20,000/- ಗಳಷ್ಟು ನಷ್ಟ ಉಂಟುಮಾಡಿರುತ್ತೀರಿ, ಆ ಮೂಲಕ 1 ಮತ್ತು 2 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.427 ಸಹವಾಚಕ 34 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಮೂರನೇಯದಾಗಿ, ದಿನಾಂಕ 19.06.2021 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಚಾಸಾ.1 ಮತ್ತು ಚಾಸಾ.2 ರವರು ತಮ್ಮ ಮನೆಯ ಮುಂಭಾಗದಲ್ಲಿರುವಾಗ 1 ನೇ ಆರೋಪಿಯಾದ ನೀವು ಚಾಸಾ.1 ರವರಿಗೆ 'ಸೂಳೆ ಮುಂಡೆ, ಬೇವರ್ಸಿಮುಂಡೆ ನಮ್ಮಪ್ಪ ನಮ್ಮವ್ವನನ್ನು ಆಸ್ತಿಗಾಗಿ ಮನೆಯಲ್ಲಿರಿಸಿಕೊಂಡಿದ್ದೀಯಾ' ಎಂದು ಅವಾಚ ಶಬ್ದಗಳಿಂದ ಬೈಯ್ದು ನಿಂದಿಸಿರುತ್ತೀರಿ, ಆ ಮೂಲಕ 1 ಮತ್ತು 2 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ.427 ಸಹವಾಚಕ 34 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ಮತ್ತು 2 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, 1 ನೇ ಆರೋಪಿತನು ಚಾಸಾ.1 ರವರ ಮುಂದಲೆಯನ್ನು ಹಿಡಿದು ಎಳೆದಾಡಿ ಅವರು ಮುಂದಕ್ಕೆ ಹೋಗದಂತೆ ತಬ್ಬಿಹಿಡಿದುಕೊಂಡು ಸಾರ್ವಜನಿಕ ಸ್ಥಳದಲ್ಲಿ ಚಾಸಾ.1 ರವರು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಅವರ ಹೆಣ್ಣುತನಕ್ಕೆ

ಮುಗುಜರವಾಗುವಂತೆ ಹರಿದು ಹಾಕಿರುತ್ತೀರಿ, ಆ ಮೂಲಕ 1 ಮತ್ತು 2 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ 354(ಬಿ) ಸಹವಾಚಕ 34 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ಮತ್ತು 2 ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ 'ನಿನ್ನನ್ನು ಇಷ್ಟಕ್ಕೆ ಬಿಡೋದಿಲ್ಲ, ಮುಂದೊಂದು ದಿನವಸ ನಿನ್ನನ್ನು ಮುಗಿಸುತ್ತೇವೆ' ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ, ಆ ಮೂಲಕ 1 ಮತ್ತು 2 ನೇ ಆರೋಪಿಗಳಾದ ನೀವು **ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ 34 ರ** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿದ್ದೇನೆ.

**(ಶ್ವೇತ.ಜಿ)**
ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ,
ಪಿರಿಯಾಪಟ್ಟಣ.